# ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ., ವಿಜಯಪುರ

**ಕಿತ್ತೂರ ಚನ್ನಮ್ಮಾ ನಗರ, ಸೋಲಾಪೂರ ರಸ್ತೆ, ವಿಜಯಪುರ.**

ನಂ.ಆಡಳಿತ/ಸಭೆ/6448/2020
ವಿಜಯಪುರ, ದಿನಾಂಕ:02-11-2020

## ವಾರ್ಷಿಕ ಸರ್ವ ಸಾಧಾರಣ ಸಭೆಯ ನೋಟೀಸು

ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ., ವಿಜಯಪುರ ಇದರ ಸನ್ 2019-20ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಶಿವಾನಂದ ಎಸ್. ಪಾಟೀಲ, ಶಾಸಕರು ಇವರ ಘನ ಅಧ್ಯಕ್ಷತೆಯಲ್ಲಿ ಶುಕ್ರವಾರ ದಿನಾಂಕ: 20-11-2020ರಂದು ಮಧ್ಯಾಹ್ನ 03.00 ಘಂಟೆಗೆ **ಕಿತ್ತೂರ ರಾಣಿ ಚನ್ನಮ್ಮ ಸಭಾ ಭವನ, ಐಶ್ವರ್ಯ ನಗರ, ಆಶ್ರಮ ರಸ್ತೆ, ವಿಜಯಪುರದಲ್ಲಿ** ಈ ಕೆಳಗೆ ನಮೂದಿಸಿದ ವಿಷಯಗಳನ್ನು ಚರ್ಚಿಸಲು ಕರೆಯಲಾಗಿದೆ.

ಕಾರಣ ಯಾವತ್ತೂ ಸದಸ್ಯರು ಸಭೆಗೆ ಆಗಮಿಸಲು ಕೋರಿದೆ.

| ಅ.ನಂ. | ವಿಷಯಗಳು | ಪುಟ ಸಂಖ್ಯೆ |
|---|---|---|
| 1. | ದಿನಾಂಕ: 18-09-2019ರಂದು ಜರುಗಿದ ಬ್ಯಾಂಕಿನ ಸರ್ವ ಸಾಧಾರಣ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು. | 03 |
| 2. | 2019-20ನೇ ಸಾಲಿನ ಬ್ಯಾಂಕಿನ ಆಡಳಿತ ಮಂಡಲಿ ನಿರ್ದೇಶಕರ ವರದಿಯನ್ನು ಪರಿಶೀಲಿಸುವುದು. | 17 |
| 3. | 2018-19ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಪರಿಶೀಲಿಸಿ ಸೂಕ್ತ ನಿರ್ಣಯ ಕೈಕೊಳ್ಳುವುದು. | 31 |
| 4. | ವಿಚಾರಣಾ ವರದಿಗಳಿದ್ದಲ್ಲಿ ಪರಿಶೀಲಿಸುವುದು. | 31 |
| 5. | 2019-20ನೇ ಸಾಲಿನ ನಿವ್ವಳ ಲಾಭ ರೂ. 10,69,17,295.97 ಗಳನ್ನು ವಿಲೇವಾರಿ ಮಾಡುವುದು ಹಾಗೂ ಸದರ ಸಾಲಿಗೆ ಲಾಭಾಂಶ ಘೋಷಿಸುವುದು. | 31 |
| 6. | ನಿರ್ವಹಣಾ ಕೊರತೆಗಳೇನಾದರೂ ಇದ್ದಲ್ಲಿ ಅವಲೋಕಿಸುವುದು ಮತ್ತು ಅಂತಹ ಕೊರತೆಗಳನ್ನು ಕಡಿಮೆಗೊಳಿಸುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುವುದು. | 32 |
| 7. | ಬ್ಯಾಂಕಿನ ಆಡಳಿತ ಮಂಡಳಿಯು 2020-21ನೇ ಸಾಲಿಗಾಗಿ ಹಮ್ಮಿಕೊಂಡಿರುವ ಕಾರ್ಯ ಚಟುವಟಿಕೆಗಳ ಕಾರ್ಯಕ್ರಮವನ್ನು ಅನುಮೋದಿಸುವ ಕುರಿತು. | 32 |
| 8. | 2019-20ನೇ ಸಾಲಿನ ಆಯ-ವ್ಯಯವನ್ನು ಅನುಮೋದಿಸುವುದು ಮತ್ತು ಸನ್ 2019-20ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಿಗೆ ಆದ ವೆಚ್ಚಗಳನ್ನು ಪರಿಶೀಲಿಸಿ ಮಂಜೂರು ಮಾಡುವುದು. | 33 |
| 9. | 2020-21ನೇ ಸಾಲಿನ ಅಂದಾಜು ಆಯ-ವ್ಯಯ ಪತ್ರಿಕೆ ಅಂಗೀಕರಿಸುವುದು. | 35 |
| 10. | ನಿರ್ಧಿಷ್ಟ ಮೀಸಲು ಹಾಗೂ ಇತರ ನಿಧಿಗಳನ್ನು ಸೃಷ್ಟಿಸುವ ಕುರಿತು. | 35 |
| 11. | ಆಧೀನ ಸಂಸ್ಥೆಗಳ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳ ಪರಿಶೀಲನೆ. | 35 |
| 12. | ಬ್ಯಾಂಕು ಇತರೆ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಪಡೆದಿರುವದನ್ನು ಗಮನಿಸಿ, ಅನುಮೋದಿಸುವುದು. | 35 |
| 13. | ಬ್ಯಾಂಕಿನ ಸಮಿತಿ ಸದಸ್ಯರುಗಳ ಅಥವಾ ಮುಖ್ಯ ಕಾರ್ಯನಿರ್ವಾಹಕರ ಸಂಬಂಧಿಕರಾಗಿದ್ದು, ಬ್ಯಾಂಕಿನ ನೌಕರರಾಗಿ ನೇಮಕಾತಿಗೊಂಡಿದ್ದಲ್ಲಿ ಅಂತಹ ನೌಕರರ ಪಟ್ಟಿಯನ್ನು ಪರಿಶೀಲಿಸುವುದು. | 35 |
| 14. | ಬ್ಯಾಂಕಿನ ಪೋಟ ನಿಯಮಗಳಿಗೆ ತಿದ್ದುಪಡಿ ಮಾಡುವ ಕುರಿತು ಪರಿಶೀಲಿಸುವುದು. | 36 |
| 15. | ಬ್ಯಾಂಕಿನ ಸಮಿತಿ ಸದಸ್ಯರು, ಪದಾಧಿಕಾರಿಗಳು ಮತ್ತು ನೌಕರರ ನೀತಿ ಸಂಹಿತೆ ರೂಪಿಸುವ ಬಗ್ಗೆ. | 36 |
| 16. | ಬ್ಯಾಂಕಿನ ಸದಸ್ಯತ್ವ ನೀಡಿರುವ ಹಾಗೂ ಸದಸ್ಯತ್ವದಿಂದ ತೆಗೆದು ಹಾಕಿರುವ ಸದಸ್ಯರ ಬಗ್ಗೆ ಪರಿಶೀಲಿಸುವುದು. | 36 |

| ಅ.ನಂ. | ವಿಷಯಗಳು | ಪುಟ ಸಂಖ್ಯೆ |
|---|---|---|
| 17. | ಬ್ಯಾಂಕಿನ ಅಧೀಕೃತ ಶೇರ ಬಂಡವಾಳದ ಮಿತಿಯನ್ನು ಗೊತ್ತುಪಡಿಸುವ ಕುರಿತು. | 36 |
| 18. | 2020-21ನೇ ಸಾಲಿನ ಬ್ಯಾಂಕಿನ ಲೆಕ್ಕ ಪರಿಶೋಧನೆಗಾಗಿ ಲೆಕ್ಕ ಪರಿಶೋಧಕರನ್ನು ನೇಮಿಸುವ ಕುರಿತು. | 36 |
| 19. | ಬ್ಯಾಂಕಿನ ಸದಸ್ಯರು ಹಾಗೂ ನಿರ್ದೇಶಕರು ಬ್ಯಾಂಕಿನ ಸೇವೆಯನ್ನು ಪಡೆದ ಬಗ್ಗೆ. | 37 |
| 20. | ಬ್ಯಾಂಕಿನ ನಿರ್ದೇಶಕರು ಹಾಗೂ ಅವರ ಸಂಬಂಧಿಕರಿಗೆ ಸಾಲ ನೀಡಿದ್ದು, ಸುಸ್ತಿಯಾಗಿದ್ದಲ್ಲಿ ವಸೂಲಾತಿ ಕುರಿತು ಪರಿಶೀಲಿಸುವುದು. | 37 |
| 21. | ಸಂಘಗಳ ಆಸ್ತಿ ಜವಾಬ್ದಾರಿ ವರ್ಗಾವಣೆ, ಕೂಡಿಕೆ ಹಾಗೂ ಪ್ರತ್ಯೇಕಿಸುವ ಕುರಿತು ಪರಿಶೀಲನೆ. | 37 |
| 22. | ವಸೂಲಾತಿಯಾಗದ ಸುಸ್ತಿ ಬಾಕಿ ಕುರಿತು ನಿರ್ಣಯಿಸುವುದು. | 37 |
| 23. | ನಿರ್ದೇಶಕರು ಹಾಗೂ ಪದಾಧಿಕಾರಿಗೆ ಸಭೆಗಳಿಗೆ ಹಾಜರಾದ ಬಗ್ಗೆ ಪ್ರವಾಸ ಭತ್ಯೆ /ದಿನಭತ್ಯೆ ನೀಡಿದ ಕುರಿತು ಪರಿಶೀಲನೆ. | 38 |
| 24. | ನಿಧಿಗಳ ಬಳಕೆ ಬಗ್ಗೆ ಪರಿಶೀಲನೆ. | 38 |
| 25. | ಸಮಾಪನೆ ಕುರಿತಂತೆ ಪರಿಶೀಲನೆ. | 39 |
| 26. | ಬ್ಯಾಂಕಿನ ಎಸ್.ಆರ್. ಶಾಖೆಯ ಕಟ್ಟಡ ನೆಲಸಮಗೊಳಿಸುವ ಕುರಿತು. | 39 |
| 27. | ಶ್ರೀ ಸುರೇಶ ಬಿ. ಪಾಟೀಲ ಕಿ.ವ್ಯವಸ್ಥಾಪಕರು ಕೆ.ಸಿ.ನಗರ ಶಾಖೆ, ಶ್ರೀ ಡಿ.ಆರ್. ಹಿರೇಕುರುಬರ ಕ್ಷೇತ್ರಾಧಿಕಾರಿ ಹಾಗೂ ಶ್ರೀಮತಿ ಎಂ.ಜೆ. ಕಂಠಿ ಪ್ರ.ದ.ಸ, ಕೇಂದ್ರ ಕಛೇರಿ ವಿಜಯಪುರ ಇವರುಗಳ ಮೇಲಿನ ಶಿಸ್ತಿನ ಕ್ರಮವನ್ನು ಮರು ಪರಿಶೀಲಿಸಲು ಸಲ್ಲಿಸಿದ ವಿನಂತಿ ಅರ್ಜಿ ಕುರಿತು. | 39 |
| 28. | ಅಧ್ಯಕ್ಷರ ಅಪ್ಪಣೆ ಮೇರೆಗೆ ಬಂದ ಇತರ ವಿಷಯಗಳು. | 40 |


ಆಡಳಿತ ಮಂಡಲಿ ಅಪ್ಪಣೆಯ ಮೇರೆಗೆ

ಸಹಿ/-

ಎನ್.ಎಸ್.ಹಣಗಿ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಪ್ರ)

**ಸೂಚನೆ:**

1. ಬ್ಯಾಂಕಿನ ಮಹಾ ಸಭೆಗೆ ಬ್ಯಾಂಕಿನ ಸದಸ್ಯತ್ವ ಹೊಂದಿದ ಸಹಕಾರ ಸಂಘವು ಒಬ್ಬ ಪ್ರತಿನಿಧಿಯನ್ನು ಆರಿಸಿ ಕಳುಹಿಸಬಹುದು ಮತ್ತು ಅಂತಹ ಪ್ರತಿನಿಧಿಯನ್ನು ನಿಯೋಜಿಸಿರುವ ಬಗ್ಗೆ ದೃಢೀಕೃತ ಠರಾವಿನ ಪ್ರತಿಯನ್ನು ಪ್ರತಿನಿಧಿಯ ಜೊತೆಗೆ ಕಳುಹಿಸಬೇಕು. ಪ್ರತಿನಿಧಿಯು ಬ್ಯಾಂಕಿನ ಮಹಾ ಸಭೆಯ ದಿನಾಂಕಕ್ಕೆ 15 ದಿವಸಕ್ಕಿಂತ ಮುಂಚಿತವಾಗಿ ಸಾಲಗಾರ ನಾತೆಯಿಂದ ಯಾವುದೇ ಸಹಕಾರ ಸಂಘಕ್ಕೆ ಕಟಬಾಕಿ ಆಗಿರತಕ್ಕದ್ದಲ್ಲ ಮತ್ತು ಕಟಬಾಕಿದಾರ ಇಲ್ಲದ ಬಗ್ಗೆ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಿಂದ ಪ್ರಮಾಣ ಪತ್ರ ತರುವುದು.
2. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 20(ಬಿ) ಯನ್ವಯ ಅರ್ಹತೆ ಹೊಂದಿದ ಸಹಕಾರ ಸಂಘದ ಪ್ರತಿನಿಧಿ ಮಾತ್ರ ಮಹಾ ಸಭೆಯಲ್ಲಿ ಆಗಬಹುದಾದ ವಿಷಯಗಳ ಮೇಲೆ ಮತ ಚಲಾಯಿಸುವ ಹಕ್ಕನ್ನು ಹೊಂದಿರುತ್ತಾರೆ.
3. ಸಭೆಯಲ್ಲಿ ಮೇಲೆ ಕಾಣಿಸಿದ ವಿಷಯಗಳನ್ನು ಹೊರತುಪಡಿಸಿ ಯಾವುದಾದರೂ ವಿಷಯಗಳನ್ನು ಚರ್ಚಿಸುವದಿದ್ದಲ್ಲಿ ಮಹಾ ಸಭೆಯ ದಿನಾಂಕಕ್ಕಿಂತ 7 ದಿವಸಗಳ ಮುಂಚಿತವಾಗಿ ಕಳುಹಿಸುವುದು. ಇಂತಹ ವಿಷಯಗಳನ್ನು ಸಭೆಯ ಅಧ್ಯಕ್ಷರ ಅನುಮತಿಗೊಳಪಟ್ಟು ಮಹಾಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಬಹುದು.